**But oft some shining April morn**
**Is darkened in an hour,**
**And blackest griefs o'ver joyous home,**
**Alas! Unseen may lower**
**Rev. J.H. Gurney**

'ರೇವತೀ! ರೇವೀ! ಎಲ್ಲಿ ಹೋದೆಯೇ ಹಾಳಾದವಳೇ.'

ಪಾಟಾಪುರ–ಕಟಕ್ ಜಿಲ್ಲೆಯ ಹರಿಹರಪುರ ಉಪವಿಭಾಗದ ಒಂದು ತೂಕಡಿಸುತ್ತಿರುವ ಹಳ್ಳಿ. ಒಂದು ಕೊನೆಯಲ್ಲಿ ಶ್ಯಾಮಬಂಧು ಮೊಹಂತಿಯವರ ಮನೆ. ಆ ಮನೆಯ ಮುಂಭಾಗದಲ್ಲೂ ಹಿಂಭಾಗದಲ್ಲೂ ಎರಡು ಸಾಲುಗಳ ಕೊಠಡಿಗಳು, ಒಂದು ಬಾವಿಯ ಸುತ್ತ ಇರುವ ಒಳ ಅಂಗಳ, ಮನೆಯ ಹಿಂದೆ ಭತ್ತ ತೂರುವುದಕ್ಕೊಂದು ಷೆಡ್ಡು, ತರಕಾರಿ ಬೆಳೆಯುವುದಕ್ಕೊಂದು ಜಾಗ, ಮುಂಭಾಗದಲ್ಲೊಂದು ಕೈದೋಟ. ಮನೆಗೆ ಬರುವವರು ಮತ್ತು ಗೇಣಿ ಕೊಡುವ ರೈತರು ಒಟ್ಟಿಗೆ ಆರಾಮಾಗಿ ಕುಳಿತುಕೊಳ್ಳುತ್ತಿದ್ದದ್ದು ಹೊರಗಣ ಕೊಠಡಿಯಲ್ಲಿಯೇ. ಗೇಣಿಯನ್ನು ಸಂಗ್ರಹಿಸುವ ಕೆಲಸ ಜಮೀಂದಾರರ ಲೆಕ್ಕಿಗ ಶ್ಯಾಮಬಂಧು ಮೊಹಂತಿ ಅವರದು. ಅವರ ಸಂಬಳ ತಿಂಗಳಿಗೆ ಎರಡು ರೂಪಾಯಿ; ಆದರೂ ಬಾಡಿಗೆ ರಶೀದಿಗಳನ್ನು, ಜಮೀನು ದಾಖಲೆಗಳನ್ನು ಸರಿಪಡಿಸುವ ಮೂಲಕ ಅವರು ಇನ್ನೊಂದಿಷ್ಟು ಗಳಿಸುತ್ತಿದ್ದರೆನ್ನಬೇಕು. ಆ ಹೆಚ್ಚುವರಿ ಸಂಪಾದನೆಯೂ ಸೇರಿದರೆ ಕೊನೆಯ ಪಕ್ಷ ನಾಲ್ಕು ರೂಪಾಯಿ. ಅದರಿಂದ ಅವರ ಸಂಸಾರ ನಡೆಯುತ್ತಿತ್ತು. ಹೇಗೋ ನಡೆಯುತ್ತಿತ್ತು ಎನ್ನುವಂತಿಲ್ಲ. ನಿಜ ಹೇಳಬೇಕೆಂದರೆ ಅವರು ನೆಮ್ಮದಿಯಾಗಿಯೇ ಇದ್ದರು. ಅವರ ಕುಟುಂಬಕ್ಕೆ ಯಾವುದೇ ಕೊರತೆಯಿರಲಿಲ್ಲ. ಹಿತ್ತಲಿನಲ್ಲಿ ಎರಡು ನುಗ್ಗೆಕಾಯಿ ಮರಗಳು, ಸದಾ ಸೊಪ್ಪು, ತರಕಾರಿ ಬೆಳೆಯುವ ಒಂದಷ್ಟು ಜಾಗ, ಹಾಲು ಕರೆಯುವ ಎರಡು ಹಸುಗಳು, ಸದಾ ಮಡಕೆಗಳಲ್ಲಿ ಸ್ವಲ್ಪವಾದರೂ ಇರುತ್ತಿದ್ದ ಹಾಲು ಮೊಸರು, ಹೀಗೆ ಅವರಿಗೆ ಬೇಕಾದುದೆಲ್ಲವೂ ಇತ್ತು. ಮೊಹಂತಿಯವರ ತಾಯಿ ಸಗಣಿ, ಭತ್ತದ ಹೊಟ್ಟು ಸೇರಿಸಿ ಬೆರಣಿ ಮಾಡುತ್ತಿದ್ದಳು. ಹಾಗಾಗಿ ಅವರು ಸೌದೆ ಕೊಳ್ಳುತ್ತಿದ್ದುದೇ ಅಪರೂಪ. ಜಮೀಂದಾರರು ಅವರಿಗೆ ಮೂರೂವರೆ ಎಕರೆ ಜಮೀನನ್ನು ಮುಫತ್ತಾಗಿ ಕೊಟ್ಟಿದ್ದರು. ಆ ಜಮೀನಿನಲ್ಲಿ ಅವರಿಗೆ ಬೇಕಾದುದೆಲ್ಲವೂ ಬೆಳೆಯುತ್ತಿತ್ತು.

ಶ್ಯಾಮಬಂಧು ಮುಚ್ಚುಮರೆಯಿಲ್ಲದ ವ್ಯಕ್ತಿ. ಅವರನ್ನು ಕಂಡರೆ ಗೇಣಿದಾರರಿಗೆ ಗೌರವವಷ್ಟೇ ಅಲ್ಲ, ವಿಶ್ವಾಸ ಕೂಡ. ಅವರು ಮನೆಮನೆಗೆ ಹೋಗಿ ಗೇಣಿ ಕೊಡುವಂತೆ ಗೇಣಿದಾರರನ್ನು ಪುಸಲಾಯಿಸುತ್ತಿದ್ದರು. ಯಾರಿಂದಲೂ ಒಂದೇ ಒಂದು ಪೈಸಾ ಹೆಚ್ಚು ಕೇಳುತ್ತಿರಲಿಲ್ಲ. ಗೇಣಿದಾರರು ಕೇಳದಿದ್ದರೂ ತಾವೇ ನಾಲ್ಕು ಬೆರಳುಗಳಷ್ಟು ಅಗಲವಾದ ತಾಳೆಗರಿಯ ರಸೀದಿಗಳನ್ನು ಅವರ ಮನೆಗಳ ಸೂರುಗಳಲ್ಲಿಡುತ್ತಿದ್ದರು. ಊರಿನ ಮೇಲೆ ಜಮೀಂದಾರರ ಗೂಂಡಾಗಳ ನೆರಳು ಕೂಡ ಬೀಳಲು ಬಿಡುತ್ತಿರಲಿಲ್ಲ. ಗೇಣಿದಾರನ ಕೈಯನ್ನು ಹಿಂಡಿ, ಅವನ ಗಲ್ಲ ಸವರಿ, ಅವನೊಂದು ಹಿಡಿ ಹೊಗೆಸೊಪ್ಪು ಕೊಳ್ಳಲೆಂದು ಎರಡು ಪೈಸೆ ಹಾಕುತ್ತಿದ್ದರು, ಅವನ ಪಂಚೆಯ ಮಡಿಕೆಯೊಳಗೆ.

ಶ್ಯಾಮಬಂಧು ತಮ್ಮ ಕಾಲದಲ್ಲಿ ತಾವು, ತಮ್ಮ ಹೆಂಡತಿ, ವಯಸ್ಸಾದ ತಮ್ಮ ತಾಯಿ, ಹತ್ತು ವರ್ಷದ ಮಗಳು, ಹೀಗೆ ನಾಲ್ಕು ಹೊಟ್ಟೆಗಳನ್ನು ತುಂಬಿಸಬೇಕಾಗಿತ್ತು. ಮಗಳ ಹೆಸರು ರೇವತಿ. ಸಾಯಂಕಾಲದ ಹೊತ್ತು ಶ್ಯಾಮಬಂಧು ತಮ್ಮ ವರಾಂಡಾದಲ್ಲಿ ಕುಳಿತು ಕೃಪಾಸಿಂಧು ವದನವನ್ನೂ ಇತರ ಪ್ರಾರ್ಥನಾ ಗೀತೆಗಳನ್ನೂ ಹಾಡುತ್ತಿದ್ದರು; ಒಮ್ಮೊಮ್ಮೆ ಒಂದು ದೀಪ ಹಚ್ಚಿ, ಮರದ ಸ್ಟ್ಯಾಂಡಿನ ಮೇಲಿಟ್ಟ ಭಾಗವತದ ಕೆಲವು ಭಾಗಗಳನ್ನು ಗಟ್ಟಿಯಾಗಿ ಓದುತ್ತಿದ್ದರು. ರೇವತಿ